# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103.

ದಿನಾಂಕ: 13.03.2024 ರಂದು ಪೂರ್ವಾಹ್ನ: 11.15 ಗಂಟೆಗೆ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ ಆವರಣ, ತುಮಕೂರು ಇಲ್ಲಿ ನಡೆದ 2023-24ನೇ ಸಾಲಿನ ನಾಲ್ಕನೇ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು

## ಹಾಜರಾದ ಸದಸ್ಯರುಗಳು

| | | |
|---|---|---|
| 1. | ಪ್ರೊ. ಎಂ. ವೆಂಕಟೇಶ್ವರಲು, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಶಿವಲಿಂಗಸ್ವಾಮಿ ಹೆಚ್.ಕೆ.<br>ಹಿರಿಯ ಡೀನರು, ಕಲಾ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 3. | ಡಾ. ಕೆ ರಾಜೀವಲೋಚನ<br>ನಿವೃತ್ತ ತತ್ವಶಾಸ್ತ್ರ ಉಪನ್ಯಾಸಕರು, ಕೌಸ್ತುಭ 179, ದಾರುಕ ಬಡಾವಣೆ, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ-577501. | ಸದಸ್ಯರು |
| 4. | ಶ್ರೀ ಕೆ.ಆರ್. ದೇವರಾಜ್<br>S/o ರಾಮಾಂಜಿನಪ್ಪ, ಮನೆ ಸಂಖ್ಯೆ: 202, ಹಳೆ ಅಂಚೆ ಕಚೇರಿ ರಸ್ತೆ, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562129 | ಸದಸ್ಯರು |
| 5. | ಡಾ. ಪ್ರಸನ್ನ<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ (ಸ್ವಾಯತ್ತ) ತುಮಕೂರು ಜಿಲ್ಲೆ. | ಸದಸ್ಯರು |
| 6. | ಶ್ರೀ ಕುಮಾರಸ್ವಾಮಿ ಹೆಚ್.ಬಿ.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ-572201. | ಸದಸ್ಯರು |
| 7. | ಪ್ರೊ. ರೇವಣಸಿದ್ದೇಶ್ವರ ಡಿ.ಆರ್.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ, ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ. | ಸದಸ್ಯರು |
| 8. | ಡಾ. ಮಾಲತಿ ವಿ<br>ಪ್ರಾಂಶುಪಾಲರು, ಪಲ್ಲಾಗಟ್ಟಿ ಅಡವಪ್ಪ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ-572202. | ಸದಸ್ಯರು |
| 9. | ಡಾ. ಕೊಟ್ರೇಶ್ ಎಂ.<br>ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 10. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 11. | ಕುಲಸಚಿವರು (ಪ್ರ) | ಸದಸ್ಯ ಕಾರ್ಯದರ್ಶಿ |

## ಹಾಜರಾಗದ ಸದಸ್ಯರು

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರು ಅಥವಾ ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರು ದಿನಾಂಕ:13.03.2024ರ ಬುಧವಾರ ಸಮಯ 11.15 ಗಂಟೆಗೆ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯದ ಆವರಣ, ಬಿ.ಹೆಚ್.ರಸ್ತೆ, ತುಮಕೂರು-572103 ಇಲ್ಲಿ ನಡೆದ 2023-24ನೇ ಸಾಲಿನ ನಾಲ್ಕನೇ ವಿಶೇಷ ಸಿಂಡಿಕೇಟ್ ಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು, ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯ ಬಗ್ಗೆ ಚರ್ಚಿಸಿ ನಿರ್ಣಯವನ್ನು ಕೈಗೊಳ್ಳಲಾಯಿತು.

| ಕ್ರಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| **ಹಣಕಾಸು ವಿಭಾಗ** | | | |
| 1. | 2023-24.ವಿ.ಸಿಂ-04 ಹ.ವಿ-01 | 2024-25ನೇ ಸಾಲಿನ ವ್ಯವಹಾರಿಕ ಆಯ-ವ್ಯಯವನ್ನು ಅನುಮೋದಿಸುವ ಕುರಿತು. | 2024-25ನೇ ಸಾಲಿನ ವ್ಯವಹಾರಿಕ ಆಯ-ವ್ಯಯವನ್ನು ದಿನಾಂಕ 07.03.2024ರಂದು ನಡೆದ ಹಣಕಾಸು ಸಮಿತಿಯಲ್ಲಿ ಅನುಮೋದನೆ-ಗೊಂಡಿರುವುದನ್ನು ಹಾಗೂ ಸದರಿ ಆಯ-ವ್ಯಯದ ಮಾಹಿತಿಯನ್ನು ಹಣಕಾಸು ಅಧಿಕಾರಿಗಳು ಸವಿಸ್ತಾರವಾಗಿ ಸಭೆಯ ಗಮನಕ್ಕೆ ತಂದರು. ಈ ಕುರಿತು ಕೂಲಂಕುಷವಾಗಿ ಚರ್ಚಿಸಿದ ಸಭೆಯು 2024-25ನೇ ಸಾಲಿನ ಹಣಕಾಸು ವರ್ಷದ ಆಯ-ವ್ಯಯದ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯು ಮಾಡಿರುವ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ** | | | |
| 2. | 2023-24.ವಿ.ಸಿಂ-04 ಸಿ.ವಿ-01 | ಸಹಾಯಕ ಪ್ರಾಧ್ಯಾಪಕರುಗಳಿಗೆ ಯು.ಜಿ.ಸಿ-ಸಿ.ಎ.ಎಸ್ ಅಡಿಯಲ್ಲಿ Academic Level 10 to 11 ಗೆ ಪದೋನ್ನತಿ ನೀಡಿರುವುದನ್ನು ಸ್ಥಿರೀಕರಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಡಾ. ಸುರೇಶ್ ಬಿ.ಕೆ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ ಇವರ ಪದೋನ್ನತಿ ಹಂತವನ್ನು Academic Level 10 to 11 ಗೆ ನಿಗದಿಪಡಿಸಿ ದಿನಾಂಕ 07.03.2024ರಂದು ಆದೇಶ ಹೊರಡಿಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| **ಖರೀದಿ ಕೋಶ** | | | |
| 3. | 2023-24.ವಿ.ಸಿಂ-04 ಖ.ಕೋ-01 | ಆಧುನಿಕ ಸಾಫ್ಟ್‌ವೇರ್ (Artificial intelligence) ಅನ್ನು ತುಮಕೂರು ವಿಶ್ವವಿದ್ಯಾನಿಲಯದ ಗಣಕ ಯಂತ್ರಗಳಿಗೆ ಅಳವಡಿಸುವ ಕುರಿತು. | ಆಧುನಿಕ ಸಾಫ್ಟ್‌ವೇರ್ (Artificial intelligence) ಅನ್ನು ತುಮಕೂರು ವಿಶ್ವವಿದ್ಯಾನಿಲಯದ 35 ಗಣಕ ಯಂತ್ರಗಳಿಗೆ Trail Testing ಗೆ M/s. Botonics Tech India Pvt. Ltd, Bangalore ಸಂಸ್ಥೆಯವರು BOTmind Application AI ತಂತ್ರಾಂಶವನ್ನು ಉಚಿತವಾಗಿ ಅಳವಡಿಸಿದ್ದು, ಈ ಸಂಬಂಧ ಸದರಿ ತಂತ್ರಾಂಶವು ಗಣಕಯಂತ್ರದಲ್ಲಿನ ದೋಷಗಳನ್ನು ಸ್ವಯಂಚಾಲಿತವಾಗಿ ಪರಿಹರಿಸಿಕೊಂಡಿರುವ ಮಾಹಿತಿಯನ್ನು ಹಾಗೂ Firewall security/ Infection, Virus protection, Internet issues, DNS flushing, Increasing Virtual Memory ತಂತ್ರಾಂಶದ ಇನ್ನಿತರೆ ಗುಣಲಕ್ಷಣಗಳ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. |

| | | | |
|---|---|---|---|
| | | | ಸದರಿ ಸಂಸ್ಥೆಯವರು ಸಾಫ್ಟ್‌ವೇರ್ ಅನ್ನು ಪ್ರತಿ ಗಣಕ ಯಂತ್ರಕ್ಕೆ ವಾರ್ಷಿಕ ರೂ.3,800.00 ರಂತೆ 400 ಗಣಕಯಂತ್ರಗಳಿಗೆ ರೂ.15,20,000.00 ಹಾಗೂ 200 ಗಣಕಯಂತ್ರಗಳಿಗೆ ಉಚಿತವಾಗಿ ಅನುಷ್ಠಾನಗೊಳಿಸಲು ಸಂಸ್ಥೆಯು ಪ್ರಸ್ತಾವನೆ ಸಲ್ಲಿಸಿರುತ್ತಾರೆ.<br>ಆದರೆ, ವಿಶ್ವವಿದ್ಯಾನಿಲಯದೊಂದಿಗೆ ದರಸಂಧಾನ ಸಂದರ್ಭದಲ್ಲಿ ಹಾಗೂ ಸಂಧಾನದ ನಂತರ ಮಾನ್ಯ ಕುಲಪತಿಗಳ ಮನವಿಯಂತೆ ಒಂದು ವರ್ಷದ ಬದಲಿಗೆ ಮೂರು ವರ್ಷಗಳ ಅವಧಿಗೆ ಪ್ರತಿ ಗಣಕ ಯಂತ್ರಕ್ಕೆ ವಾರ್ಷಿಕ ರೂ.2,000.00 ರಂತೆ 400 ಗಣಕಯಂತ್ರಗಳಿಗೆ ರೂ.8,00,00.00 (ತೆರಿಗೆ ರಹಿತ) ಹಾಗೂ ಒಟ್ಟಾರೆಯಾಗಿ 1000 ಗಣಕಯಂತ್ರ/ ಲ್ಯಾಪ್‌ಟಾಪ್‌ಗಳಿಗೆ ಸದರಿ ತಂತ್ರಾಂಶವನ್ನು ಉಚಿತವಾಗಿ ಅನುಷ್ಠಾನಗೊಳಿಸಲು ಸಂಸ್ಥೆಯು ಒಪ್ಪಿರುತ್ತಾರೆ.<br>ಈ ಕುರಿತು ಸದರಿ ಸಂಸ್ಥೆಯವರೊಂದಿಗೆ ಚರ್ಚಿಸಿ ಕೈಗೊಂಡಿರುವ ನಿರ್ಣಯದಂತೆ BOTmind Application AI ತಂತ್ರಾಂಶದ ಅನುಷ್ಠಾನದ ಅಳವಡಿಕೆಗೆ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ನಿರ್ಣಯಿಸಿತು. |

## <u>ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು</u>

1) ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳಿಗೆ ಈಗಾಗಲೇ ನೀಡಿರುವ ಲ್ಯಾಪ್‌ಟಾಪ್‌ಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ, ಅಂತಹ ಲ್ಯಾಪ್‌ಟಾಪ್‌ಗಳನ್ನು ವಿಶ್ವವಿದ್ಯಾನಿಲಯದಿಂದಲೇ ದುರಸ್ಥಿ ಮಾಡಲು ಹಾಗೂ ದುರಸ್ಥಿಯಾಗದ ಲ್ಯಾಪ್‌ಟಾಪ್‌ಗಳ ಬದಲಾಗಿ ಹೊಸ ಲ್ಯಾಪ್‌ಟಾಪ್‌ಗಳನ್ನು ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ ವಿತರಿಸಲು ಸಭೆಯು ಒಪ್ಪಿತು, ಈ ಸಂಬಂಧ ಹೊಸ ಲ್ಯಾಪ್‌ಟಾಪ್ ಮತ್ತು ಪ್ರಿಂಟರ್‌ಗಳನ್ನು ವಿತರಿಸಲು ಸಿಂಡಿಕೇಟ್ ಸದಸ್ಯರಾದ ಡಾ.ಶಿವಲಿಂಗಸ್ವಾಮಿ ಹೆಚ್.ಕೆ., ಇವರು ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಸಂಬಂಧ ನಿಯಮಾನುಸಾರ ಕ್ರಮ ಕೈಗೊಂಡು ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸುವುದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ತಿಳಿಸಿದರು.
2) ವಿಶ್ವವಿದ್ಯಾನಿಲಯದ 20ನೇ ವರ್ಷದ ಸಂಸ್ಥಾಪನಾ ದಿನಾಚರಣೆಯನ್ನು ಏಪ್ರಿಲ್/ ಮೇ 2024ರಲ್ಲಿ ನಡೆಸುವುದಾಗಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವಂತಹ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ ಸಿಬ್ಬಂದಿಗಳು/ ವಿದ್ಯಾರ್ಥಿಗಳಿಗೆ ಗೌರವಿಸುವುದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ತಿಳಿಸಿದರು.

3) ಸ್ನಾತಕೋತ್ತರ ಕನ್ನಡ ಮತ್ತು ಇಂಗ್ಲಿಷ್ ಅಧ್ಯಯನ ವಿಭಾಗಗಳ ಸಹಭಾಗಿತ್ವದಲ್ಲಿ ಸಿನಿಮೋತ್ಸವ ಮತ್ತು ಸಾಹಿತ್ಯೋತ್ಸವ ಕಾರ್ಯಕ್ರಮಗಳನ್ನು ವಿಶ್ವವಿದ್ಯಾನಿಲಯದ ಉತ್ಸವಗಳೆಂದು ಪರಿಗಣಿಸಿ ಕಾರ್ಯಕ್ರಮಗಳನ್ನು ನಡೆಸುವಂತೆ ಸಿಂಡಿಕೇಟ್ ಸದಸ್ಯರಾದ ಡಾ. ಶಿವಲಿಂಗಸ್ವಾಮಿ ಹೆಚ್.ಕೆ ಇವರು ಸಭೆಯಲ್ಲಿ ತಿಳಿಸಿದರು. ಈ ಕುರಿತು, ಸದರಿ ಕಾರ್ಯಕ್ರಮಗಳಿಗೆ ತಲಾ ರೂ.2.00 (ಎರಡು ಲಕ್ಷಗಳು ಮಾತ್ರ) ಗಳನ್ನು 2024–25ನೇ ಆಯ-ವ್ಯಯದಲ್ಲಿ ಮೀಸಲಿರಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಯವರು ಸಭೆಯಲ್ಲಿ ತಿಳಿಸಿದರು.

| | | | |
|---|---|---|---|
| ಕುಲಸಚಿವರು (ಪರೀಕ್ಷಾಂಗ) | [signature] | ಪ್ರೊ. ಹೆಚ್.ಕೆ. ಶಿವಲಿಂಗಸ್ವಾಮಿ | sd/- |
| ಡಾ. ಕೆ ರಾಜೀವಲೋಚನ | sd/- | ಡಾ. ಪ್ರಸನ್ನ | sd/- |
| ಶ್ರೀ ಕೆ.ಆರ್. ದೇವರಾಜ್ | sd/- | ಶ್ರೀ ಕುಮಾರಸ್ವಾಮಿ ಹೆಚ್.ಬಿ. | sd/- |
| ಡಾ. ಕೊಟ್ರೇಶ್ ಎಂ. | sd/- | ಪ್ರೊ. ರೇವಣಸಿದ್ದೇಶ್ವರ ಡಿ.ಆರ್. | sd/- |
| ಜಂಟಿ ನಿರ್ದೇಶಕರು, ಕಾ.ಶಿ.ಇ | sd/- | ಡಾ. ಮಾಲತಿ ವಿ | sd/- |

[signature] 13/3/24.
ಮಾನ್ಯ ಕುಲಸಚಿವರು I/c

[signature]
ಮಾನ್ಯ ಕುಲಪತಿಗಳು